# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ: 17.08.2021ರಂದು ಪೂರ್ವಾಹ್ನ 11.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಡಾ.ವಿದ್ಯಾಶಂಕರ್.ಎಸ್.ರವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ಭವನದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ನಡೆದ ವ್ಯವಸ್ಥಾಪನಾ ಮಂಡಳಿಯ 54ನೇ ವಿಶೇಷ ಸಭೆಯ ನಡವಳಿ.

| ಉಪಸ್ಥಿತರು | |
|---|---|
| ಡಾ. ವಿದ್ಯಾಶಂಕರ್.ಎಸ್.<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು | **ಪ್ರೊ. ಆರ್. ರಾಜಣ್ಣ**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು,<br>ಕರಾಮುವಿ, ಮೈಸೂರು |
| ಶ್ರೀ ಎಸ್. ನಾಗರಾಜ್,<br>ವಿಧಾನ ಪರಿಷತ್ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಕರಾಮುವಿ, ಮೈಸೂರು. | **ಶ್ರೀ ಎನ್. ಅಪ್ಪಾಜಿಗೌಡ**<br>ಶಾಸಕರು, ವಿಧಾನ ಪರಿಷತ್ ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.162/49, "ನೈದಿಲೆ", 6ನೇ ಅಡ್ಡ ರಸ್ತೆ,<br>ಬಾಪೂಜಿ ಬಡಾವಣೆ, ಚಂದ್ರ ಲೇಔಟ್,<br>ವಿಜಯನಗರ, ಬೆಂಗಳೂರು-560 040 |
| **ಡಾ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮೈಸೂರು | **ಪ್ರೊ. ಯಶಸ್ವಿನಿ.ಎಸ್.**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 303, 2ನೇ ಮಹಡಿ<br>ಗೌರವ್ ದಿ ರೆಸಿಡೆನ್ಸಿ ಅಪಾರ್ಟ್‌ಮೆಂಟ್<br>1ನೇ ಮುಖ್ಯ ರಸ್ತೆ, ಲಕ್ಷ್ಮೀ ಪುರಂ,<br>ಮೈಸೂರು – 570 004 |
| **ಶ್ರೀ ಎನ್. ಕೃಷ್ಣೇಗೌಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 150, 2ನೇ ಅಡ್ಡ ರಸ್ತೆ, 'ಐ' ಬ್ಲಾಕ್<br>ಕುವೆಂಪುನಗರ, ಮೈಸೂರು – 570 023 | **ಡಾ. ಪ್ರದೀಪ್.ಪಿ.ಆರ್.,**<br>ನಂ. 1653, 1ನೇ ಮಹಡಿ, 5ನೇ ಅಡ್ಡ ರಸ್ತೆ,<br>6ನೇ ಸಿ ಮುಖ್ಯ ರಸ್ತೆ, ಆರ್.ಪಿ.ಸಿ. ಬಡಾವಣೆ,<br>ಬೆಂಗಳೂರು – 560 040 |
| **ಡಾ. ಆರ್.ಹೆಚ್. ಅಕಮಂಚಿ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 55, 'ಕಾಮಧೇನು'<br>ಕೃಷ್ಣಾ ಬಡಾವಣೆ, ಲಕ್ಷ್ಮೀ ನಗರ, ಗೋಕುಲ ರಸ್ತೆ,<br>ಹುಬ್ಬಳ್ಳಿ – 580 030 | **ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ**<br>ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ<br>ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ<br>ಮಂಗಳ ಗಂಗೋತ್ರಿ, ಮಂಗಳೂರು – 574 199 |
| **ಶ್ರೀಮತಿ ಲಾವಣ್ಯ.ಪಿ.**<br>ನಂ. 401, ಟಿ.ಎಫ್. ಮಾಲ್ಗುಡಿ ಅಪಾರ್ಟ್‌ಮೆಂಟ್<br>ನಾದಬ್ರಹ್ಮ ಸಂಗೀತ ಸಭಾ ಎದುರುಗಡೆ<br>ಲಕ್ಷ್ಮೀಪುರಂ, ಮೈಸೂರು – 570 004 | -- |

ಕುಲಪತಿಗಳು

ಕುಲಸಚಿವರು

| ಅನುಪಸ್ಥಿತರು | |
|---|---|
| **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**<br>ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ), ಹಾಗೂ<br>ವ್ಯವಸ್ಥಾಪನ ಮಂಡಳಿಯ ಸದಸ್ಯರು<br>ಬೆಂಗಳೂರು – 560 001 | **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001 |
| **ಶ್ರೀ ಬಿ.ಸಿ. ನಾಗೇಶ್.,**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 93, 1ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ<br>ಕೆ.ಆರ್. ಬಡಾವಣೆ, ತಿಪಟೂರು ತಾಲ್ಲೂಕು<br>ತುಮಕೂರು ಜಿಲ್ಲೆ – 572 201 | **ಶ್ರೀ ಎಲ್. ನಾಗೇಂದ್ರ**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 2373/ಸಿ, 1ನೇ ಅಡ್ಡ ರಸ್ತೆ,<br>5ನೇ ಮುಖ್ಯ ರಸ್ತೆ, ಜಯನಗರ,<br>ಮೈಸೂರು – 570 014 |

ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ನಂತರ, ಮಾನ್ಯ ಕುಲಪತಿಗಳು ತಮ್ಮ ಪ್ರಸ್ತಾವಿಕ ನುಡಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಯು.ಜಿ.ಸಿ., ನವದೆಹಲಿಯಿಂದ 11 ಹೊಸ ಕೋರ್ಸ್‌ಗಳಿಗೆ ಮಾನ್ಯತೆ ದೊರೆತಿರುವ ವಿಷಯವನ್ನು ಸಭೆಯ ಗಮನಕ್ಕೆ ತರುತ್ತಾ, ಎಲ್ಲಾ 11 ಕೋರ್ಸ್‌ಗಳ ಕುರಿತು ವಿವರಗಳನ್ನು ಸಭೆಯಲ್ಲಿ ವಿವರಿಸಿದರು. ನಂತರ, ಕುಲಪತಿಗಳು ಮಾತನಾಡಿ, ಆನ್‌ಲೈನ್ Programmes ಗಳನ್ನು ಪಡೆಯುವ ಸಂಬಂಧ, ಪಿ.ಪಿ.ಆರ್.ಗಳನ್ನು ಸಲ್ಲಿಸಿರುವುದಾಗಿಯೂ, ಈ ಸಂಬಂಧ, ಯು.ಜಿ.ಸಿಯ Expert Committee ಯೊಂದಿಗೆ 06 ಬಾರಿ ಆನ್ ಲೈನ್ ಮೀಟಿಂಗ್‌ಗಳು ನಡೆಸಿದ್ದು, ಯು.ಜಿ.ಸಿ. ವತಿಯಿಂದ ಅಂತಿಮ ನಿರ್ಧಾರವನ್ನು ನಿರೀಕ್ಷಿಸುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

ನಂತರ, ಅಧ್ಯಕ್ಷರು ವಿಷಯಸೂಚಿ ಪ್ರಕಾರ 54ನೇ ವಿಶೇಷ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಚರ್ಚಿಸಲು ಪ್ರಾರಂಭಿಸಿದರು.

<u>ವಿಷಯ ಸಂಖ್ಯೆ : 54.01</u>

ವಿಷಯ : **Sri.Basava Prabhu.S.Patil, Senior Designated Counsel, New Delhi, ಇವರಿಗೆ SLP (Crl) No.3781-3784/2021ರ ಸಂಬಂಧ ವಕೀಲ ಶುಲ್ಕ ಪಾವತಿಸುವ ಬಗ್ಗೆ.**

* * * * *

ವಿಶ್ವವಿದ್ಯಾನಿಲಯದಲ್ಲಿ ನಡೆಯಲಾಗಿದೆ ಎನ್ನಲಾದ ವಿವಿಧ ಅಕ್ರಮಗಳ ಬಗ್ಗೆ Retd., Justice Dr.K.Bhakthavatsala, One Man Fact Finding Committee ವರದಿಯನ್ವಯ ಘನತೆವೆತ್ತ ಕುಲಾಧಿಪತಿಗಳ ನಿರ್ದೇಶನದಂತೆ ವಿಶ್ವವಿದ್ಯಾನಿಲಯವು ವಿಶ್ರಾಂತ ಕುಲಪತಿಗಳಾದ Prof.K.S. Rangappa & Prof.M.G. Krishnan ಮತ್ತು ಮಾಜಿ ಕುಲಸಚಿವರುಗಳಾದ Prof.P.S.Naik & Prof.B.S.Vishwanath ಇವರುಗಳ ವಿರುದ್ಧ ಜಯಲಕ್ಷ್ಮೀಪುರಂ ಪೋಲಿಸ್ ಠಾಣೆ, ಮೈಸೂರು ಇಲ್ಲಿ ದಿನಾಂಕ:20.11.2019ರಂದು ಪಿರ್ಯಾದು ನೀಡಿದ್ದು, ಈ ಸಂಬಂಧ ಪೋಲಿಸ್ ಠಾಣೆಯು ಸದರಿಯವರುಗಳ ವಿರುದ್ಧ FIR.No.53/2019 ಅನ್ನು ದಾಖಲಿಸಿರುತ್ತಾರೆ.

ಮೇಲ್ಕಂಡವರು ಸದರಿ FIR ಅನ್ನು ರದ್ದುಪಡಿಸುವಂತೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ Criminal Petition Nos.8762/2019, 8752/2019, 8768/2019 ಮತ್ತು 8772/2019 ಗಳನ್ನು ದಾಖಲಿಸಿದ್ದು, ಸದರಿ ಪ್ರಕರಣಗಳು Common Order (Judgment) ಮೂಲಕ

ಕುಲಪತಿಗಳು ಕುಲಸಚಿವರು

ದಿನಾಂಕ:15.09.2020ರಂದು Allowed ಆಗಿದ್ದು, FIR Cr.No53/2019 ಅನ್ನು ರದ್ದುಗೊಳಿಸಿ ಆದೇಶಿಸಿರುತ್ತದೆ.

ವಿಶ್ವವಿದ್ಯಾನಿಲಯವು ಮಾನ್ಯ ಉಚ್ಛ ನ್ಯಾಯಾಲಯದ ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಸರ್ವೋಚ್ಛ ನ್ಯಾಯಾಲಯ, ನವದೆಹಲಿ ಇಲ್ಲಿ Special Leave Petition (Crl) No.3781-3784/2021 ಅನ್ನು Sri.Shekhar.G.Devasa, ವಕೀಲರು ಇವರ ಮೂಲಕ ಸಲ್ಲಿಸಲಾಗಿರುತ್ತದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಸದರಿ Special Leave Petition (Crl) ಅನ್ನು Admit ಮಾಡುವ ಸಂಬಂಧ Sri.Basava Prabhu.S.Patil, Senior Designated Counsel, New Delhi ಇವರ ಸೇವೆಯನ್ನ ಪಡೆಯಲಾಗಿರುತ್ತದೆ. ಈ ಸಂಬಂಧ ಸದರಿ ವಕೀಲರು ದಿನಾಂಕ:11.07.2021 ಮತ್ತು 12.07.2021ರಂದು ಮಾನ್ಯ ನ್ಯಾಯಾಲಯದಲ್ಲಿ Appearance and Conference ಮಾಡಿರುವ ಸಂಬಂಧ ಒಟ್ಟು ವಕೀಲ ಶುಲ್ಕ ರೂ.3,30,000/- (ಮೂರು ಲಕ್ಷದ ಮೂವತ್ತು ಸಾವಿರ ರೂಪಾಯಿ ಮಾತ್ರ)ಗಳ ಪಾವತಿಗಾಗಿ ಕೋರಿರುತ್ತಾರೆ. (ಅನುಬಂಧ-ಅ)

Sri.Basava Prabhu.S.Patil, ಇವರು ಕೋರಿರುವ ವಕೀಲ ಶುಲ್ಕವನ್ನ ಪಾವತಿಸುವ ಬಗ್ಗೆ ವ್ಯವಸ್ಥಾಪನಾ ಮಂಡಳಿ ಸಭೆಯ ಪರಿಗಣನೆ ಮತ್ತು ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

* * * * *

<u>ತೀರ್ಮಾನ</u> :

ಸದರಿ ವಿಷಯದ ಬಗ್ಗೆ ಚರ್ಚಿಸಲಾಯಿತು. ಮಾನ್ಯ ಸದಸ್ಯರಾದ ಶ್ರೀ ಅಪ್ಪಾಜಿಗೌಡರವರು ಮಾತನಾಡಿ, ಇಷ್ಟೊಂದು ವಕೀಲ ಶುಲ್ಕ ಪಾವತಿಯ ಬಗ್ಗೆ ಸ್ಪಷ್ಟೀಕರಣ ಕೇಳಿದರು. ಇದಕ್ಕೆ ಪ್ರತಿಕ್ರಯಿಸಿದ ಮಾನ್ಯ ಕುಲಪತಿಗಳು, ತಮ್ಮ ವಕೀಲರ ಕೋರಿಕೆಯ ಮೇರೆಗೆ ಹಿರಿಯ ವಕೀಲರ ಸೇವೆಯನ್ನು ಪಡೆಯಲಾಗಿತ್ತು ಎಂದು ತಿಳಿಸಿ, ಶುಲ್ಕವನ್ನು ಪಾವತಿಸಬೇಕಾಗುತ್ತದೆಂದು ಮನವರಿಕೆ ಮಾಡಿದರು. ಆನಂತರ, ಸಭೆಯು, **Sri.Basava Prabhu.S.Patil** ಇವರಿಗೆ ವಕೀಲ ಶುಲ್ಕ ರೂ. 3,30,000/- ಗಳನ್ನು ಪಾವತಿಸುವಂತೆ ತೀರ್ಮಾನಿಸಿತು.

* * * * * * *

<u>ವಿಷಯ ಸಂಖ್ಯೆ: 54.02</u>

<u>ವಿಷಯ</u> : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಅಧ್ಯಯನ ಪೀಠದ ಕರಡು ಪರಿನಿಯಮಕ್ಕೆ ಅನುಮೋದನೆ ಪಡೆಯುವ ಬಗೆಗೆ.

<u>ಉಲ್ಲೇಖ</u> :

1) ದಿನಾಂಕ: 25-06-2021 ರಂದು ನಡೆದ 17ನೇ ವಿಶೇಷ ಶೈಕ್ಷಣಿಕ ಮಂಡಳಿಯ ಸಭೆಯ ನಿರ್ಣಯ.
2) ದಿನಾಂಕ: 03-07-2021 ರಂದು ನಡೆದ 165ನೇ ವ್ಯವಸ್ಥಾಪನಾ ಮಂಡಳಿಯ ಸಭೆಯ ನಿರ್ಣಯ.

* * * * *

ಮೇಲ್ಕಂಡ ವಿಷಯ ಹಾಗು ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿನಾಂಕ: 25-06-2021ರಂದು ನಡೆದ 17ನೇ ವಿಶೇಷ ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ವಿಷಯದಲ್ಲಿ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ಗಣ್ಯ ವ್ಯಕ್ತಿಗಳ ವಿಚಾರಗಳನ್ನು ಪ್ರಚುರ ಪಡಿಸುವ ಹಿತದೃಷ್ಟಿಯಿಂದ ಹೆಚ್ಚಿನ ಅಧ್ಯಯನ ಪೀಠಗಳನ್ನು

ಕುಲಪತಿಗಳು　　　　　　　　　　　　ಕುಲಸಚಿವರು

ಸ್ಥಾಪಿಸುವ ಉದ್ದೇಶಿತ ವಿಷಯವು ಚರ್ಚಿತವಾಗಿದ್ದು, ಅದರಂತೆ, **ಹೆಚ್.ಜಗದ್ಗುರು ಡಾ. ಶ್ರೀ. ಶಿವರಾತ್ರಿರಾಜೇಂದ್ರ ಮಹಾ ಸ್ವಾಮಿಗಳು, ಸುತ್ತೂರು ಮಠ** ಇವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸುವ ಸಂಬಂಧ ಅನುಮೋದನೆ ಪಡೆದು, ಸದರಿ ವಿಷಯವನ್ನು ದಿನಾಂಕ: 03-07-2021 ರಂದು ನಡೆದ 165ನೇ ವ್ಯವಸ್ಥಾಪನಾ ಮಂಡಳಿ ಸಭೆಯು ಒಪ್ಪಿರುತ್ತದೆ.

**ಹೆಚ್. ಜಗದ್ಗುರು ಡಾ. ಶ್ರೀ. ಶಿವರಾತ್ರಿರಾಜೇಂದ್ರ ಮಹಾ ಸ್ವಾಮಿಗಳು, ಸುತ್ತೂರು ಮಠ** ಇವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸುವ ಸಂಬಂಧ ಕರಡು ಪರಿನಿಯಮವನ್ನು ಸಿದ್ಧಪಡಿಸಲಾಗಿದ್ದು, ಸದರಿ ಪರಿನಿಯಮವನ್ನು ಮುಂಬರುವ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಅವಶ್ಯಕವಾಗಿರುತ್ತದೆ. ಅನುಮೋದನೆ ಪಡೆದ ನಂತರ ಸದರಿ ಪರಿನಿಯಮವನ್ನು ಸರ್ಕಾರದ ಮುಖಾಂತರ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸಲ್ಲಿಸಬೇಕಾಗಿದೆ. ಈ ವಿಷಯದ ಬಗ್ಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

* * * * * *

<u>ತೀರ್ಮಾನ</u> : ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಹೆಚ್. ಜಗದ್ಗುರು ಡಾ. ಶ್ರೀ. ಶಿವರಾತ್ರಿರಾಜೇಂದ್ರ ಮಹಾ ಸ್ವಾಮಿಗಳು, ಸುತ್ತೂರು ಮಠ ಇವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸುವ ಸಂಬಂಧ ಪರಿನಿಯಮವನ್ನು ಸರ್ಕಾರದ ಮುಖಾಂತರ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕೆ ಸಲ್ಲಿಸಲು ಒಪ್ಪಿಗೆ ನೀಡಿತು.

* * * * * * *

<u>ವಿಷಯ ಸಂಖ್ಯೆ : 54.03</u>

<u>ವಿಷಯ</u> : ಬೆಂಗಳೂರಿನ ಬೊಮ್ಮನಹಳ್ಳಿ ವ್ಯಾಪ್ತಿಯಲ್ಲಿ ಕಾರಮುವಿಯ ಪ್ರಾದೇಶಿಕ ಕೇಂದ್ರವನ್ನು ಹೊಸದಾಗಿ ಸ್ಥಾಪನೆ ಮಾಡುವ ಕುರಿತು.

* * * * * * *

ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರವನ್ನು ಹೊಸದಾಗಿ ಬೆಂಗಳೂರಿನ ಬೊಮ್ಮನಹಳ್ಳಿ ವ್ಯಾಪ್ತಿಯಲ್ಲಿ ಸ್ಥಾಪನೆಮಾಡುವಂತೆ ಸದರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ.ಎಂ.ಸತೀಶ್‌ರೆಡ್ಡಿರವರು ಮತ್ತು ಉನ್ನತ ಶಿಕ್ಷಣ ಸಚಿವರಾದ ಮಾನ್ಯ ಡಾ||ಅಶ್ವತ್‌ನಾರಾಯಣ.ಸಿ.ಎನ್. ಇವರು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದು ಶೈಕ್ಷಣಿಕವಾಗಿ ಹಿಂದುಳಿದಿರುವ ಪ್ರದೇಶವಾದ ಬೆಂಗಳೂರಿನ ಬೊಮ್ಮನಹಳ್ಳಿ ವ್ಯಾಪ್ತಿಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಪೂರೈಕೆಗಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರವನ್ನು ಬೆಂಗಳೂರಿನ ಬೊಮ್ಮನಹಳ್ಳಿ ವ್ಯಾಪ್ತಿಯಲ್ಲಿ ಸ್ಥಾಪನೆ ಮಾಡುವಂತೆ ಕೋರಿದ್ದು, ಮಾನ್ಯ ಕುಲಪತಿಗಳು ದಿನಾಂಕ: 23-07-2021 ರಂದು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸುವಂತೆ ತಿಳಿಸಿರುವುದರಿಂದ ಸದರಿ ವಿಷಯವನ್ನು ವ್ಯವಸ್ಥಾಪನಾ ಮಂಡಳಿಯ ಚರ್ಚೆ ಮತ್ತು ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

* * * * * * *

<u>ತೀರ್ಮಾನ</u> : ವಿಷಯವನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ಮಾನ್ಯ ಕುಲಪತಿಗಳು ಸದರಿ ಕೇಂದ್ರವನ್ನು ಸರ್ಕಾರಕ್ಕೆ ಸೇರಿದ ಕಟ್ಟಡದಲ್ಲಿ ಪ್ರಾರಂಭಿಸುತ್ತಿರುವ ಅಂಶವನ್ನು ಸಭೆಗೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಸದಸ್ಯರಾದ ಶ್ರೀ ಸಂದೇಶ್ ನಾಗರಾಜುರವರು ಸರ್ಕಾರಿ ಕಟ್ಟಡವಾದ್ದರಿಂದ ಪ್ರಾರಂಭಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. ಇದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿತು.

* * * * * * *

ಕುಲಪತಿಗಳು



ಕುಲಸಚಿವರು

<u>ವಿಷಯ ಸಂಖ್ಯೆ : 54.04</u>

<u>ವಿಷಯ</u> : ಕೊಡಗು ಜಿಲ್ಲೆಯಲ್ಲಿ ಕಾರಮುವಿಯ ಪ್ರಾದೇಶಿಕ ಕೇಂದ್ರವನ್ನು ಹೊಸದಾಗಿ ಸ್ಥಾಪನೆ ಮಾಡುವ ಕುರಿತು.

* * * * * * *

ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರವನ್ನು ಹೊಸದಾಗಿ ಕೊಡಗು ಜಿಲ್ಲೆಯಲ್ಲಿ ಸ್ಥಾಪನೆ ಮಾಡುವಂತೆ ಸದರಿ ಲೋಕಸಭಾ ಕ್ಷೇತ್ರದ ಮಾನ್ಯ ಸಂಸದರಾದ ಪ್ರತಾಪ್ ಸಿಂಹ ಇವರು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದು ಶೈಕ್ಷಣಿಕವಾಗಿ ಹಿಂದುಳಿದಿರುವ ಪ್ರದೇಶವಾದ ಕೊಡಗು ಜಿಲ್ಲೆ ಮತ್ತು ಸುತ್ತಮುತ್ತಲಿನ ಪ್ರದೇಶಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಪೂರೈಕೆಗಾಗಿ ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರವನ್ನು ಕೊಡಗು ಜಿಲ್ಲೆಯಲ್ಲಿ ಸ್ಥಾಪನೆ ಮಾಡುವಂತೆ ಕೋರಿದ್ದು, ಮಾನ್ಯ ಕುಲಪತಿಗಳು ದಿನಾಂಕ : 11-08-2021 ರಂದು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಿರುವಂತೆ ತಿಳಿಸಿರುವುದರಿಂದ ಸದರಿ ವಿಷಯವನ್ನು ವ್ಯವಸ್ಥಾಪನಾ ಮಂಡಳಿಯ ಚರ್ಚೆ ಮತ್ತು ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

<u>ತೀರ್ಮಾನ</u> : ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಕೊಡಗು ಜಿಲ್ಲೆಯಲ್ಲಿ ಕರಾಮುವಿಯ ಪ್ರಾದೇಶಿಕ ಕೇಂದ್ರವನ್ನು ಹೊಸದಾಗಿ ಸ್ಥಾಪಿಸಲು ಒಪ್ಪಿಗೆ ನೀಡಿತು.

ಮುಂದುವರೆದು, ಮಾನ್ಯ ಸದಸ್ಯರಾದ ಡಾ. ಆರ್.ಎಚ್. ಅಕಮಂಚಿರವರು ಮಾತನಾಡಿ, ಈಗಾಗಲೇ ಪ್ರಾರಂಭಿಸಿರುವ ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಜಿಲ್ಲೆಗಳಲ್ಲೂ ಸಹ ಪ್ರಾದೇಶಿಕ ಕೇಂದ್ರವನ್ನು ಸ್ಥಾಪಿಸುವುದು ಸೂಕ್ತವೆಂದು ಸಭೆಯಲ್ಲಿ ತಿಳಿಸಿದರು. ಸಭೆಯು ಇದಕ್ಕೆ ಸರ್ವಾನುಮತದಿಂದ ಒಪ್ಪಿಗೆಯನ್ನು ನೀಡಿತು. ಜಿಲ್ಲಾ ಕೇಂದ್ರಗಳಲ್ಲಿ ಅಗತ್ಯಗನುಗುಣವಾಗಿ ಪ್ರಾದೇಶಿಕ ಕೇಂದ್ರಗಳನ್ನು ತೆರೆಯಲು ಕುಲಪತಿಗಳಿಗೆ ಅಧಿಕಾರವನ್ನು ನೀಡಿತು.

* * * * * * *

<u>ವಿಷಯ ಸಂಖ್ಯೆ : 54.05</u>

<u>ವಿಷಯ</u> : ದಿನಾಂಕ : 31.07.2021ರಂದು ನಡೆದ ವಿ.ವಿ.ನಿಲಯದ 25ನೇ ಕಟ್ಟಡ ಸಮಿತಿ ಸಭೆಯ ನಡವಳಿ ಬಗ್ಗೆ.

* * * * * * *

ದಿನಾಂಕ : 31.07.2021ರಂದು ವಿ.ವಿ.ನಿಲಯದ ಆಡಳಿತ ಭವನದ ಕುಲಪತಿಗಳ ಸಭಾಂಗಣದಲ್ಲಿ ನಡೆದ 25ನೇ ಕಟ್ಟಡ ಸಮಿತಿ ಸಭೆಯ ನಡವಳಿಯನ್ನು 54ನೇ ವಿಶೇಷ ವ್ಯವಸ್ಥಾಪನಾ ಮಂಡಳಿ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

* * * * * *

ದಿನಾಂಕ: 31.07.2021 ರ ಶನಿವಾರ ಸಂಜೆ 04.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಮಾನ್ಯ ಕುಲಪತಿಯವರ ಸಭಾಂಗಣದಲ್ಲಿ ನಡೆದ 25ನೇ ಕಟ್ಟಡ ಸಮಿತಿ ಸಭೆಯ ನಡವಳಿ.

<u>ಉಪಸ್ಥಿತರು :</u>

| | | | |
|---|---|---|---|
| 01. | ಕುಲಪತಿಗಳು<br>ಕರಾಮುವಿ, ಮೈಸೂರು. | - | ಅಧ್ಯಕ್ಷರು |
| 02. | ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜು)<br>ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ. | - | ಸದಸ್ಯರು |

ಕುಲಪತಿಗಳು ಕುಲಸಚಿವರು

| | | | |
|---|---|---|---|
| 03. | ಕುಲಸಚಿವರು,<br>ಕರಾಮುವಿ, ಮೈಸೂರು. | – | ಸದಸ್ಯ ಕಾರ್ಯದರ್ಶಿಗಳು |
| 04. | ಹಣಕಾಸು ಅಧಿಕಾರಿಗಳು,<br>ಕರಾಮುವಿ, ಮೈಸೂರು. | – | ಸದಸ್ಯರು |
| 05. | ಅಧೀಕ್ಷಕ ಅಭಿಯಂತರರು,<br>ಲೋಕೋಪಯೋಗಿ ಬಂದರು ಮತ್ತು ಒಳನಾಡು<br>ಜಲಸಾರಿಗೆ ಇಲಾಖೆ ಮೈಸೂರು ವೃತ್ತ, ಮೈಸೂರು. | – | ಸದಸ್ಯರು |
| 06. | ಅಧೀಕ್ಷಕ ಅಭಿಯಂತರರು (ವಿದ್ಯುತ್),<br>ಕಾರ್ಯ ಮತ್ತು ಪಾಲನ ನಗರ ವೃತ್ತ,<br>ಜೋಡಿ ಬಸವೇಶ್ವರ ರಸ್ತೆ, ಕುವೆಂಪುನಗರ,<br>ಮೈಸೂರು. | – | ಸದಸ್ಯರು |
| 07. | ಕಾರ್ಯಪಾಲಕ ಅಭಿಯಂತರರು,<br>ಕರಾಮುವಿ, ಮೈಸೂರು. | – | ಸಂಚಾಲಕರು |
| 08 | ಮೆ॥ ಗಿರೀಶ್.ಎಂ.ಸ್ವಾಮಿ<br>ವಾಸ್ತುಶಿಲ್ಪ ಮತ್ತು ವಿನ್ಯಾಸಗಾರರು<br>ಬೆಂಗಳೂರು | – | ಆಹ್ವಾನಿತರು |

ಮಾನ್ಯ ಕುಲಪತಿಯವರು ಸದಸ್ಯರುಗಳನ್ನು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭಗೊಂಡಿತು. ನಂತರ, ಮಾತನಾಡಿ, ಸಭೆಯಲ್ಲಿ ಮಂಡಿಸಲಾಗಿರುವ ವಿಷಯಗಳನ್ನು ಚರ್ಚಿಸುವ ನಿಟ್ಟಿನಲ್ಲಿ ವಿಷಯಗಳನ್ನು ವಿವರಿಸುವಂತೆ ಕಾರ್ಯಪಾಲಕ ಅಭಿಯಂತರರಿಗೆ ಸೂಚನೆ ನೀಡಿದರು.

| ಕ್ರ.ಸಂ | ಕಾಮಗಾರಿ | ಅಂದಾಜು ಮೊತ್ತ (ರೂ.) |
|---|---|---|
| 1 | ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು ತಿಪ್ಪಸಂದ್ರ ಹೋಬಳಿ ತಿಪ್ಪಸಂದ್ರ ಗ್ರಾಮದ ಜಾಗದಲ್ಲಿ ಕರಾಮುವಿ ನಿಲಯದ ಪ್ರಾದೇಶಿಕ ಕಛೇರಿ ಕಟ್ಟಡ ಹಾಗೂ ಸಂಸ್ಕೃತ ಅಧ್ಯಯನ ಕೇಂದ್ರದ ಕಟ್ಟಡದ ನಿರ್ಮಾಣ ಕೆಲಸ | 2500.00 ಲಕ್ಷಗಳು |
| 2 | ಮಂಗಳೂರಿನಲ್ಲಿ ಪ್ರಾದೇಶಿಕ ಕೇಂದ್ರ / ವಿದ್ಯಾರ್ಥಿಗಳ ಕಲಿಕಾ ಸಲಹ ಕೇಂದ್ರ ಕಟ್ಟಡ ನಿರ್ಮಾಣ | 2277.00 ಲಕ್ಷಗಳು |
| 3 | ಧಾರವಾಡದಲ್ಲಿ ಪ್ರಾದೇಶಿಕ ಕೇಂದ್ರ / ವಿದ್ಯಾರ್ಥಿಗಳ ಕಲಿಕಾ ಸಲಹ ಕೇಂದ್ರ ಕಟ್ಟಡ ನಿರ್ಮಾಣ | 1925.00 ಲಕ್ಷಗಳು |
| 4 | ಹಂಸ ಕಟ್ಟಡದ ದುರಸ್ತಿ ನಿರ್ವಹಣೆ ಮತ್ತು ನವೀಕರಿಸುವುದರ ಕೆಲಸ | 330.00 ಲಕ್ಷಗಳು |
| 5 | ಮಾನಸ ಕಟ್ಟಡದ ದುರಸ್ತಿ ನಿರ್ವಹಣೆ ಮತ್ತು ನವೀಕರಿಸುವುದರ ಕೆಲಸ | 670.00 ಲಕ್ಷಗಳು |
| 6 | **ವಿವಿನಿಲಯವು ದತ್ತು ಪಡೆದಿರುವ ಶಾಲೆಗಳ ಕಟ್ಟಡ ನಿರ್ಮಾಣ ಹಾಗೂ ದುರಸ್ತಿ ನಿರ್ವಹಣೆ ಕೆಲಸ** | |
| (I) | ಮಾನ್ಯ ಉಪಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವರಾದ ಡಾ. ಶ್ರೀ ಅಶ್ವಥನಾರಾಯಣ. ಸಿ.ಎನ್ ರವರು ಬೆಂಗಳೂರಿನ ಜಿಲ್ಲೆಯಲ್ಲಿ ಸೂಚಿಸಿರುವ ರಾಜ್ಯ ಸರ್ಕಾರಿ ಶಾಲಾ ಕಟ್ಟಡಗಳ ಅಭಿವೃದ್ಧಿ ನಿರ್ವಹಣೆ ಮತ್ತು ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ತಿಪ್ಪಸಂದ್ರ ಹೋಬಳಿಯಲ್ಲಿನ ಸಾಂಕಿಘಟ್ಟ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲ ಕಟ್ಟಡಗಳ ಅಭಿವೃದ್ಧಿ ನಿರ್ವಹಣೆ ಮಾಡುವ ಕೆಲಸ | 150.00 ಲಕ್ಷಗಳು |
| (II) | ಮಾನ್ಯ ಶ್ರೀ ಎಲ್. ನಾಗೇಂದ್ರ ವಿಧಾನಸಭಾ ಸದಸ್ಯರು, ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಶಾಲೆ/ಕಾಲೇಜುಗಳಿಗೆ ಸಂಬಂಧಿಸಿದಂತೆ ದೇವರಾಜ ಬಾಲಕೀಯರ ಸ್ವತಂತ್ರ ಪದವಿ ಪೂರ್ವ ಕಾಲೇಜು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಉತ್ತರ ವಲಯ, ಮೇಟಗಳ್ಳಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಯಾದವಗಿರಿ, ದೇ.ಜ.ಗೌ ಟ್ರಸ್ಟ್ ರವರ ಕುವೆಂಪು ಶಾಲೆ, ಬೃಂದಾವನ ಬಡಾವಣೆ, ಸರ್ಕಾರಿ | 300.00 ಲಕ್ಷಗಳು |

ಕುಲಪತಿಗಳು



ಕುಲಸಚಿವರು

| ಕ್ರ.ಸಂ | ಕಾಮಗಾರಿ | ಅಂದಾಜು ಮೊತ್ತ (ರೂ.) |
|---|---|---|
| | ಹಿರಿಯ ಪ್ರಾಥಮಿಕ ಶಾಲೆ, ಕುಂಬಾರಕೊಪ್ಪಲು ಮತ್ತು ಬಾಲಕೀಯರ ಸರ್ಕಾರಿ ಪದವಿಪೂರ್ವ ಕಾಲೇಜು, ಪೀಪಲ್ಸ್ ಪಾರ್ಕ್, ನಜರ್‌ಬಾದ್ ಶಾಲಾ ಕಟ್ಟಡಗಳ ಅಭಿವೃದ್ಧಿ ನಿರ್ವಹಣೆ ಮಾಡುವ ಕೆಲಸ | |
| (III) | ಮಾನ್ಯ ಶ್ರೀ ಎನ್. ಕೃಷ್ಣೇಗೌಡ ರವರು ವ್ಯವಸ್ಥಾಪನ ಮಂಡಳಿ ಸದಸ್ಯರು ಇವರು ಸೂಚಿಸಿರುವ ಪಾಂಡವಪುರ ತಾಲ್ಲೂಕಿನ ಅರಳುಕುಪ್ಪೆ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಜೊತೆಗೆ ಸೀತಾಪುರದ ಗ್ರಾಮದ ಸರ್ಕಾರಿ ಶಾಲೆಯನ್ನು ಅಭಿವೃದ್ಧಿ ಪಡಿಸುವ ಕೆಲಸ | 100.00 ಲಕ್ಷಗಳು |
| (IV) | ರಾಜ್ಯ ಸರ್ಕಾರದ ಸಭಾಪತಿಯವರಾದ ಮಾನ್ಯ ಶ್ರೀ ವಿಶ್ವೇಶ್ವರ ಹೆಗ್ಡೆ, ಕಾಗೇರಿ, ರವರ ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಜನತಾ ವಿದ್ಯಾಲಯ ಕುಲುವೆಯಲ್ಲಿ ಶಾಲಾ ಕಟ್ಟಡದ ಕಂಪ್ಯೂಟರ್ ಲ್ಯಾಬ್ ಮತ್ತು ಗ್ರಂಥಾಲಯ ಕೊಠಡಿಗಳ ನಿರ್ವಹಣೆ, ಸೈಕಲ್ ಸ್ಟ್ಯಾಂಡ್ ನಿರ್ಮಾಣದ ಕೆಲಸ ಮತ್ತು ಶಾಲಾ ಕಟ್ಟಡಕ್ಕೆ ಆರ್ಚ್ ಮತ್ತು ಕಾಂಪೌಂಡ್ ನಿರ್ಮಾಣ ಮಾಡುವ ಕೆಲಸ | 30.00 ಲಕ್ಷಗಳು |
| (V) | ಚಿತ್ರದುರ್ಗಾ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಹಳೆಯಳನಾಡಿನಲ್ಲಿ ನೂತನ ಶಾಲಾ ಕೊಠಡಿಗಳ ನಿರ್ಮಾಣ ಹಾಗೂ ಆಲೂರಿನಲ್ಲಿನ ಶಾಲೆಯ ಹಳೆಯ ಕಟ್ಟಡಗಳ ಅಭಿವೃದ್ಧಿ ಕೆಲಸ ಮತ್ತು ಅಗತ್ಯ ಇತರೆ ಕೆಲಸ ಹಾಗೂ ಸಾಮಾಗ್ರಿಗಳಾದ ಶುದ್ಧ ಕುಡಿಯುವ ನೀರಿನ ಯಂತ್ರ, ಗ್ರಂಥಾಲಯಕ್ಕಾಗಿ ಪೀಠೋಪಕರಣ, ವಿಜ್ಞಾನ ಪ್ರಯೋಗಾಲಯದ ವ್ಯವಸ್ಥೆ, ಸ್ಟೂಡೆಂಟ್ ಡೆಸ್ಕ್, ಚೇರ್ ಮತ್ತು ಟೇಬಲ್‌ಗಳನ್ನು ಅಳವಡಿಸಲು, ಧ್ವನಿವರ್ಧಕರ ವ್ಯವಸ್ಥೆ, ಆಟದ ಸಲಕರಣೆಗಳು ಇತ್ಯಾದಿಗಳನ್ನು ಒಳಗೊಂಡಂತೆ ನಿರ್ವಹಿಸುವ ಕೆಲಸ | 115.00 ಲಕ್ಷಗಳು |
| (VI) | ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ ಸರ್ಕಾರಿ ಶಾಲೆಯನ್ನು ಅಭಿವೃದ್ಧಿ ಪಡಿಸುವ ಕೆಲಸ | 100.00 ಲಕ್ಷಗಳು |
| (VII) | ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಸರ್ಕಾರಿ ಶಾಲೆಯನ್ನು ಅಭಿವೃದ್ಧಿ ಪಡಿಸುವ ಕೆಲಸ | 100.00 ಲಕ್ಷಗಳು |
| | ಒಟ್ಟು ಮೊತ್ತ | 8597.00 ಲಕ್ಷಗಳು |

ಕಾರ್ಯಪಾಲಕ ಅಭಿಯಂತರರು ಮಾತನಾಡಿ, ಕ್ರಮ ಸಂಖ್ಯೆ (1) ರಿಂದ (6)ರಲ್ಲಿನ ಕಾಮಾಗಾರಿ ಕೆಲಸಗಳನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ ಈಗಾಗಲೇ ಹಿಂದಿನ ವ್ಯವಸ್ಥಾಪನ ಮಂಡಳಿ ಸಭೆಗಳಲ್ಲಿ ಅನುಮೋದನೆ ಪಡೆಯಲಾಗಿದ್ದು, ಅದರಂತೆ ವಿವಿನಿಲಯವು ನೇಮಿಸಿಕೊಂಡಿರುವ ವಾಸ್ತು ಶಿಲ್ಪ ಮತ್ತು ವಿನ್ಯಾಸಗಾರರಿಂದ ಈ ಎಲ್ಲಾ ಕಾಮಗಾರಿ ಕೆಲಸಗಳನ್ನು ನಿರ್ವಹಿಸಲು ಅಂದಾಜು ಒಟ್ಟು ರೂ. 8597.00 ಲಕ್ಷಗಳಿಗೆ ಸಿದ್ಧಪಡಿಸಿ ಸಲ್ಲಿಸಿರುವುದರ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು. ಸದರಿ ಸಭೆಗೆ ಆಹ್ವಾನಿಸಿದ್ದ ವಾಸ್ತುಶಿಲ್ಪ ಮತ್ತು ವಿನ್ಯಾಸಗಾರರನ್ನು ಸಭೆಯ ಸದಸ್ಯರುಗಳಿಗೆ ಪರಿಚಯಿಸಿದರು. ಇದಕ್ಕೆ ಮಾನ್ಯ ಸದಸ್ಯರಾದ ಶ್ರೀ ಸಂದೇಶ್ ನಾಗರಾಜು ರವರು ವಾಸ್ತು ಶಿಲ್ಪ ಮತ್ತು ವಿನ್ಯಾಸಗಾರರನ್ನು ತಮ್ಮ ಪರಿಚಯವನ್ನು ಸಭೆಗೆ ತಿಳಿಸುವಂತೆ ಸೂಚಿಸಿದರು. ಇದಕ್ಕೆ ವಾಸ್ತುಶಿಲ್ಪಗಾರರು ತಾವು ಇದೇ ರೀತಿಯ ಕೆಲಸಗಳನ್ನು ಸರ್ಕಾರಿ ಇಲಾಖೆಗಳಲ್ಲಿ ವಿನ್ಯಾಸ, ನಕ್ಷೆ ಮತ್ತು ಅಂದಾಜುಗಳನ್ನು ನಿರ್ವಹಿಸುವುದರ ಬಗ್ಗೆ ವಿವರಿಸಿದರು. ಸದಸ್ಯರಾದ ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಅಭಿಯಂತರರು ವಿನ್ಯಾಸಗಾರರನ್ನು ಅಂದಾಜನ್ನು ತಾಯಾರಿಸುವ ಮೊದಲು ಜಾಗದ ಸ್ಥಳ ಪರಿವೀಕ್ಷಣೆ ಮಾಡಿ ಅದರ ಎಸ್.ಆರ್.ಸಿ.ಯ ಅನುಸಾರ ಅಂದಾಜನ್ನು ತಯಾರಿಸಲು ವಿನ್ಯಾಸ ಮಾಡಿರುವುದರ ಬಗ್ಗೆ ಕೇಳಲಾಗಿ, ವಿನ್ಯಾಸಗಾರರು ಈ ಬಗ್ಗೆ ಎಲ್ಲಾ ಅಂದಾಜುಗಳನ್ನು ಆಯಾ ಜಿಲ್ಲಾವ್ಯಾಪ್ತಿಯ ಸ್ಥಳ ಪರಿವೀಕ್ಷಣೆ ಮಾಡಿ ಹಾಗೂ ಎಸ್.ಆರ್.ಸಿ. ಅನುಸಾರ ಮತ್ತು ಇಲಾಖಾ ದರಸೂಚಿಯ ಅನುಸಾರ ಅಂದಾಜನ್ನು ಸಿದ್ಧಪಡಿಸಿರುವುದಾಗಿ ತಿಳಿಸಿದರು. ತದನಂತರ ಸಂದೇಶ್ ನಾಗರಾಜು ರವರು ಮಾತನಾಡಿ ಕ್ರಮ ಸಂಖ್ಯೆ (1)ರ ಕಟ್ಟಡವನ್ನು ಕರಾಮುವಿಯ ಬಗ್ಗೆ ವಿವರಣೆ ನೀಡುವಂತೆ ಕೇಳಲಾಗಿ ಇದಕ್ಕೆ ಮಾನ್ಯ ಕುಲಪತಿಯವರು ಕರಾಮುವಿಯು ಸಂಸ್ಕೃತ ವಿವಿನಿಲಯದೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದು, ಸದರಿ ಸ್ಥಳದಲ್ಲಿ ಪ್ರಾದೇಶಿಕ ಕಛೇರಿಯ ಕಟ್ಟಡವನ್ನು ನಿರ್ಮಿಸುವುದರ ಬಗ್ಗೆ ಸಭೆಯ ಗಮನಕ್ಕೆ ತಂದರು.

ಕುಲಪತಿಗಳು

ಕುಲಸಚಿವರು

ಮುಂದುವರೆದು, ಕಾರ್ಯಪಾಲಕ ಅಭಿಯಂತರರು ಮಾತನಾಡಿ ಮೇಲಿನ ಎಲ್ಲಾ ಕಾಮಗಾರಿಗಳ ಅಂದಾಜುಗಳಿಗೆ ಲೋಕೋಪಯೋಗಿ ಇಲಾಖೆಯ ದರ ಸೂಚಿ ಅನುಸಾರ ಹಾಗೂ ಕರಾಮುವಿಯಲ್ಲಿ ಈ ಹಿಂದಿನ ಅನುಮೋದಿತ ದರಗಳು ಮತ್ತು ಸ್ಥಳಿಯ ಮಾರುಕಟ್ಟೆಯ ದರಗಳನ್ನು ಅಳವಡಿಸಿ ವಾಸ್ತುಶಿಲ್ಪಗಾರರು ಅಂದಾಜುಗಳನ್ನು ಸಲ್ಲಿಸಿರುವುದಾಗಿ ಹಾಗೂ ಈ ಹಿಂದಿನ ಕಾಮಗಾರಿಗಳ ಪರಿಷ್ಕೃತ ಅಂದಾಜುಗಳಿಗೆ ಬಳಿಕ ಇಲಾಖೆಯ ವತಿಯಿಂದಲೆ ಅನುಮೋದನೆ ಪಡೆದು ಅಗತ್ಯ ಕ್ರಮ ಕೈಗೊಳ್ಳಲು ಮುಖ್ಯ ಅಭಿಯಂತರರು ಸೂಚಿಸಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಸದಸ್ಯರಾದ ಲೋಕೋಪಯೋಗಿ ಇಲಾಖೆ ಅಧೀಕ್ಷಕ ಅಭಿಯಂತರರು ಮಾತನಾಡಿ ಈ ಹಿಂದೆ ಪರಿಷ್ಕೃತ ಅಂದಾಜುಗಳಿಗೆ ಕ್ರಮ ಕೈಗೊಂಡಿರುವ ರೀತಿಯಲ್ಲಿಯೇ ವಿವಿನಿಲಯದ ವತಿಯಿಂದಲೇ ಕ್ರಮಕೈಗೊಳ್ಳಬಹುದೆಂದು ತಿಳಿಸಿದರು. ಈ ಬಗ್ಗೆ ಉಳಿದ ಎಲ್ಲಾ ಸದಸ್ಯರು ತಮ್ಮ ಸಮ್ಮತಿಯನ್ನು ಸೂಚಿಸಿದರು.

ಕಾಮಗಾರಿಗಳ ಗುಣಮಟ್ಟದ ಹಾಗೂ ಪರಿಮಾಣವನ್ನು ಆಗಿಂದ್ದಾಗೆ ಪರಿವೀಕ್ಷಿಸಿಕೊಳ್ಳಲು PMC (Project Management Consultant) ಏಜೆನ್ಸಿ ಒಬ್ಬರನ್ನು ನೇಮಿಸಿಕೊಳ್ಳುವ ಬಗ್ಗೆ ಸಭೆಯ ಗಮನಕ್ಕೆ ತರಲಾಗಿ, ಈ ಬಗ್ಗೆ ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಅಭಿಯಂತರರು ಹಾಗೂ ವಿದ್ಯುತ್ ವಿಭಾಗದ ಅಧೀಕ್ಷಕ ಅಭಿಯಂತರರು ಮಾತನಾಡಿ ಕಾಮಗಾರಿಗಳನ್ನು PMC ರವರಿಗೆ ನೀಡುವುದು ಸೂಕ್ತವಾಗಿರುವುದಾಗಿ ತಿಳಿಸಿದರು.

<u>ನಿರ್ಣಯ:</u>

01) ಕ್ರಮ ಸಂಖ್ಯೆ (1) ರಿಂದ (6) ರವರೆಗಿನ ಕಾಮಗಾರಿಗಳ ನಕ್ಷೆ ಮತ್ತು ಅಂದಾಜುಗಳಿಗೆ ಅನುಮೋದನೆಯನ್ನು ನೀಡಲು ಒಪ್ಪಲಾಯಿತು.
02) ಈ ಎಲ್ಲಾ ಕಾಮಗಾರಿಗಳಿಗೆ ಗುಣಮಟ್ಟ ಹಾಗೂ ಪರಿಮಾಣ ಪರಿವೀಕ್ಷಣೆಗಾಗಿ PMC ರವರನ್ನು ಟೆಂಡರ್ ಕರೆದು ನೇಮಿಸಿಕೊಳ್ಳಲು ಒಪ್ಪಲಾಯಿತು.
03) ಈ ಎಲ್ಲಾ ಕಾಮಗಾಗಳನ್ನು ನಿಯಮಾನುಸಾರ ಟೆಂಡರ್ ಕರೆದು ಕಾಮಗಾರಿಗಳನ್ನು ನಿರ್ವಹಿಸಲು ಅನುಮೋದಿಸಲಾಯಿತು.

ಸಭೆಯಲ್ಲಿ ಹಾಜರಿದ್ದ ಸಮಿತಿಯ ಸದಸ್ಯರುಗಳೆಲ್ಲರಿಗೂ ವಂದನೆಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯವಾಯಿತು.

<u>ತೀರ್ಮಾನ</u> : ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಕಟ್ಟಡ ಸಮಿತಿ ಸಭೆಯ ನಡವಳಿಯನ್ನು ಅನುಮೋದಿಸಿತು ಹಾಗೂ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ಅಲ್ಪಾವಧಿ ಟೆಂಡರ್ ಕರೆದು ಕೆಲಸವನ್ನು ನಿರ್ವಹಿಸುವಂತೆ ಸಭೆಯಲ್ಲಿ ತೀರ್ಮಾನವಾಯಿತು. ಮಾನ್ಯ ಸದಸ್ಯರಾದ ಶ್ರೀ ಎನ್. ಅಪ್ಪಾಜಿಗೌಡ, ಶಾಸಕರು, ತಾವು ಪ್ರತಿನಿಧಿಸುವ ಕ್ಷೇತ್ರದಲ್ಲಿ ಎರಡು ಶಾಲೆಗಳನ್ನು ಗುರುತಿಸಿ, ಅಲ್ಲಿಯೂ ಮೂಲಭೂತ ಸೌಲಭ್ಯವನ್ನು ಕಲ್ಪಿಸಲು ಕೋರಿದರು. ಸಭೆಯು ಇದಕ್ಕೆ ಸರ್ವಾನುಮತದಿಂದ ಒಪ್ಪಿತು.

ಮುಂದುವರೆದು, ಅಗತ್ಯವಿರುವ ಸ್ಥಳದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

* * * * * * *

<u>ವಿಷಯ ಸಂಖ್ಯೆ: 54.06</u>

<u>ವಿಷಯ</u> : ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯ ಕಟ್ಟಡಗಳಿಗೆ **Internal Connectivity** ಗೆ **Optical Fiber Cable (OFC)** ಅಳವಡಿಸಿ **wi-fi** ಸೌಲಭ್ಯವನ್ನು ನೀಡುವ ಬಗೆಗೆ.

* * * * * *

ಕುಲಪತಿಗಳು



ಕುಲಸಚಿವರು

ವಿಶ್ವವಿದ್ಯಾನಿಲಯದ ಸುಸೂತ್ರ ಕಾರ್ಯನಿರ್ವಹಣೆ, ಶೈಕ್ಷಣಿಕ ಚಟುವಟಿಕೆಗಳಿಗೆ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿವಿ ನಿಲಯದ ಕಟ್ಟಡಗಳಿಗೆ Internal Connectivity ಗೆ Optical Fiber Cable (OFC) ಅಳವಡಿಸಿ Wi-fi ಸೌಲಭ್ಯವನ್ನು ಒದಗಿಸುವ ಕಾರ್ಯವನ್ನು ನಿಯಮಾನುಸಾರ ಕೈಗೊಳ್ಳುವ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ಅನುಮೋದನೆಗಾಗಿ 165ನೇ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ (ವಿಷಯ ಸಂಖ್ಯೆ: 165.09) ಮಂಡಿಸಲಾಗಿ ಸಭೆಯಲ್ಲಿ ಕೆಳಕಂಡಂತೆ ತೀರ್ಮಾನವಾಗಿರುತ್ತದೆ.

ತೀರ್ಮಾನ:

**ವಿಷಯವನ್ನು ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ಪೂರ್ಣ ಕ್ಯಾಂಪಸ್‌ಗೆ Wi-fi ಸೌಲಭ್ಯದ ಅವಶ್ಯಕತೆ ಇರುವುದನ್ನು ಮನಗಂಡ ಮಾನ್ಯ ಸದಸ್ಯರುಗಳು ಸದರಿ ಕಾರ್ಯವನ್ನು Keonics ಮೂಲಕ ಕಾರ್ಯಗತಗೊಳಿಸುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು.**

ಮುಂದುವರೆದು, ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ) (ಪ್ರ) ರವರ ಅಧಿಸೂಚನೆ ಸಂಖ್ಯೆ: ಆಇ:498 ವೆಚ್ಚ-12/2020 ದಿನಾಂಕ: 25.11.2020 (ಪ್ರತಿ ಲಗತ್ತಿಸಿದೆ) ರಲ್ಲಿ Kenonics ಸಂಸ್ಥೆಯವರಿಂದ ಅಧಿಸೂಚನೆ ದಿನಾಂಕ ದಿಂದ ಒಂದು ವರ್ಷದ ಅವಧಿಗೆ ಪಡೆಯುವ IT Software & IT Harware, Networking and IT Services ಗೆ ಸಂಬಂಧಿಸಿದಂತೆ ರೂ.1,00,00,000/- (ಒಂದು ಕೋಟಿ ಮಾತ್ರ)ಗೆ ಸೀಮಿತಗೊಳಿಸಲಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯ ಕಟ್ಟಡಗಳ Internal Connectivity ಗೆ Optical Fiber Cable (OFC) ಅಳವಡಿಸಿ wi-fi ಸೌಲಭ್ಯವನ್ನು ನೀಡುವ ಕಾರ್ಯಕ್ಕೆ ರೂ.5,95,00,000/- (ರೂ. ಐದು ಕೋಟಿ ತೊಂಭತ್ತೈದು ಲಕ್ಷ ಮಾತ್ರ) ಗಳ ಮೊತ್ತವನ್ನು ಅಂದಾಜಿಸಲಾಗಿರುವ ಹಿನ್ನೆಲೆಯಲ್ಲಿ ಸದರಿ ಕಾರ್ಯವನ್ನು ಯಾವ ಪ್ರಕ್ರಿಯೆಯಿಂದ ಕೈಗೊಳ್ಳಬೇಕೆಂಬ ವಿಷಯವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮರು ಮಂಡಿಸಿದೆ.

* * * * * *

ತೀರ್ಮಾನ : **ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯ ಕಟ್ಟಡಗಳಿಗೆ Internal Connectivity ಗೆ Optical Fiber Cable (OFC) ಅಳವಡಿಸಿ wi-fi ಸೌಲಭ್ಯವನ್ನು ನೀಡುವ ಕೆಲಸವನ್ನು ಇ-ಟೆಂಡರಿಂಗ್ ಮೂಲಕ ನಿರ್ವಹಿಸಲು ಒಪ್ಪಿಗೆ ನೀಡಿತು.**

* * * * * * *

ವಿಷಯ ಸಂಖ್ಯೆ: 54.07

ವಿಷಯ : **18ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು ಅನುಮೋದಿಸುವ ಕುರಿತು.**

* * * * * *

ದಿನಾಂಕ : 12-08-2021ರಂದು ನಡೆದ 18ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು ಮುಂಬರುವ 54ನೇ ವಿಶೇಷ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ತೀರ್ಮಾನ :

**18ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ವಿಷಯಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಸದರಿ ಸಭೆಯ ನಡವಳಿಯನ್ನು ಯಥಾವತ್ತಾಗಿ ಅನುಮೋದಿಸಿತು.**

* * * * * * *

ಕುಲಪತಿಗಳು



ಕುಲಸಚಿವರು

**<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆಗೊಂಡ ಇನ್ನಿತರೆ ವಿಷಯಗಳು :</u>**

1. ದಿನಾಂಕ : 02.08.2021ರಂದು 22 ಮಂದಿ ಸಹಾಯಕ ಪ್ರಾಧ್ಯಾಪಕರು ನೀಡಿರುವ ಮನವಿಯ ಬಗ್ಗೆ ಮಾತನಾಡಿದ ಮಾನ್ಯ ಕುಲಪತಿಗಳು ಸಮಿತಿಯ ವರದಿಯನ್ನು ಮಂಡಿಸಿದರು. ಮುಂದುವರೆದು, ಡಾ. ಭಕ್ತವತ್ಸಲ.ಕೆ., ನಿವೃತ್ತ ನ್ಯಾಯಾಧೀಶರು, ಏಕ ಸದಸ್ಯ ಸತ್ಯ ಶೋಧನಾ ಸಮಿತಿಯ ವರದಿನ್ವಯ ಪಿ.ಐ.ಎಲ್. ಗೆ ಸಂಬಂಧಿಸಿದಂತೆ ಸಹಾಯಕ ಪ್ರಾಧ್ಯಾಪಕರುಗಳಿಗೆ ತಿಳುವಳಿಕೆ ನೀಡಿ ಕ್ರಮ ವಹಿಸಲಾಗಿತ್ತು. ಆ ನೋಟಿಸ್‌ಗೆ ತಡೆಯಾಜ್ಞೆ ತಂದು ಮುಂದುವರೆಯುತ್ತಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು ಹಾಗೂ ಹಿಂದೆ ನೀಡುತ್ತಿದ್ದ ಕೆಲವು ಸೌಲಭ್ಯಗಳನ್ನು ಸ್ಥಗಿತಗೊಳಿಸಿರುವ ಅಂಶವನ್ನು ಸಭೆಗೆ ತಿಳಿಸಿದರು. ಈ ಬಗ್ಗೆ ಕೂಲಕಂಕಷವಾಗಿ ಚರ್ಚಿಸಿ, ನ್ಯಾಯಾಲಯದ ತೀರ್ಪಿಗೆ ಒಳಪಟ್ಟು ಅವರಿಗೆ ನ್ಯಾಯಬದ್ಧವಾಗಿ ಬರಬೇಕಾಗಿರುವ ಎಲ್ಲ ಸೌಲಭ್ಯಗಳನ್ನು ಮುಚ್ಚಳಿಕೆ ಬರೆಸಿಕೊಂಡು ವಿಸ್ತರಿಸಲು ತೀರ್ಮಾನಿಸಿತು.

2. ದಿನಾಂಕ : 30.05.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 160ನೇ ಸಾಮಾನ್ಯ ಸಭೆಯ ವಿ.ಸಂ.: 160.19 ರನ್ವಯ ವೃತ್ತಿ ಪದೋನ್ನತಿ ಯೋಜನೆಯಡಿ ಪದೋನ್ನತಿ ನೀಡುವ ಸಂಬಂಧ ಆಗಿರುವ ಆಯ್ಕೆ ಸಮಿತಿಯ ತೀರ್ಮಾನದಂತೆ ಹಾಗೂ ದಿನಾಂಕ: 06.03.2021 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 164ನೇ ಸಾಮಾನ್ಯ ಸಭೆಯ ವಿ.ಸಂ. : 164.02ರ ನಿರ್ಣಯದಂತೆ ಕರಾಮುವಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರುಗಳಿಗೆ ಸಿ.ಎ.ಎಸ್. ಅಡಿಯಲ್ಲಿ ಪ್ರಯೋಜನ ವಿಸ್ತರಿಸುವ ಸಂಬಂಧ ಯಾವುದೇ ಅಧ್ಯಾಪಕರು ತಮಗೆ ನೀಡಿರುವ ವೇತನ ನಿಗದಿಕರಣದ ಬಗ್ಗೆ ಆಕ್ಷೇಪವಿದ್ದಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿತ್ತು. ಅದರಂತೆ, (1) ಡಾ. ಎನ್. ಲಕ್ಷ್ಮಿ, ಮುಖ್ಯಸ್ಥರು, ಶಿಕ್ಷಣಶಾಸ್ತ್ರ ವಿಭಾಗ (2) ಡಾ. ಎನ್. ಆರ್. ಚಂದ್ರೇಗೌಡ, ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ (3) ಡಾ. ಮಹದೇವ ಸ್ವಾಮಿ.ಪಿ., ಸಹಾಯಕ ಪ್ರಾಧ್ಯಾಪಕರು, ಮನೋವಿಜ್ಞಾನ ಅಧ್ಯಯನ ವಿಭಾಗ (4) ಡಾ. ಎನ್. ಹರೀಶ್, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ (5) ಡಾ. ಚಿನ್ನಯ್ಯ.ಪಿ.ಎಂ., ಸಹಾಯಕ ಪ್ರಾಧ್ಯಾಪಕರು, ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ ಮತ್ತು (6) ಶ್ರೀಮತಿ ಉಷಾ.ಸಿ., ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಇವರುಗಳು ಮನವಿಯನ್ನು ಸಲಿಸಲಾಗಿ, ಸದರಿರವರುಗಳ ಮನವಿಯನ್ನಾಧರಿಸಿ, ವಿಶ್ವವಿದ್ಯಾನಿಲಯವು ಅಧ್ಯಾಪಕ ವೃಂದದ ಪದೋನ್ನತಿ ಸಂಬಂಧ, ಕುಂದು-ಕೊರತೆ ನಿವಾರಣಾ ಸಮಿತಿಯನ್ನು ರಚಿಸಿತು. ಪ್ರೊ. ಪಿ.ಸುಬ್ರಹ್ಮಣ್ಯ ಯಡಪಡಿತ್ತಾಯ, ಮಾನ್ಯ ಕುಲಪತಿಗಳು, ಮಂಗಳೂರು ವಿ.ವಿ., ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ, (ಸಮಿತಿಯ ಅಧ್ಯಕ್ಷರು) ಮತ್ತು ಪ್ರೊ. ತಳವಾರ್, ನಿವೃತ್ತ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಬೆಂಗಳೂರು ವಿ.ವಿ. (ಸಮಿತಿಯ ಸದಸ್ಯರು) ಇವರುಗಳನ್ನೊಳಗೊಂಡ ಸಮಿತಿಯು ದಿನಾಂಕ : 16.08.2021ರಂದು ಸಭೆ ಸೇರಿ ಸಿದ್ಧಪಡಿಸಿದ ವರದಿಯನ್ನು ದಿನಾಂಕ : 17.08.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 54ನೇ ವಿಶೇಷ ಸಭೆಗೆ ಮಂಡಿಸಿದರು. ಸಮಿತಿಯ ಶಿಫಾರಸ್ಸನ್ನು ಕೂಲಕಂಷವಾಗಿ ಚರ್ಚಿಸಿದ ಸಭೆಯು, ಸಮಿತಿಯ ಶಿಫಾರಸ್ಸಿನಂತೆ ಕ್ರಮ ಕೈಗೊಳ್ಳಲು ಅನುಮೋದನೆ ನೀಡಿತು.

3. ದಿನಾಂಕ : 03.03.2021ರಂದು ನಡೆದ ಹಣಕಾಸು ಸಮಿತಿ ಸಭೆಯ ನಡವಳಿ (ವಿ.ಸಂ. : 82.8.1) ಯನ್ನು ದಿನಾಂಕ : 06.03.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 164ನೇ ಸಾಮಾನ್ಯ ಸಭೆಯಲ್ಲಿ (ವಿ.ಸಂ. : 164.09) ಅನುಮೋದಿಸಿರುವಂತೆ ಕಿಯೋನಿಕ್ಸ್ ಸಂಸ್ಥೆಯವರಿಗೆ ದಿನಾಂಕ : 29.03.2021ರಂದು ಪತ್ರ ಬರೆಯಲಾಗಿ, ಸದರಿ ಸಂಸ್ಥೆಯವರು ದಿನಾಂಕ : 17.04.2021ರಂದು ತಮ್ಮ " KEONICS Providing the basic level HR Man power the Dtat-Entry, day to day office work etc., it may not fulfil KSOU Mysore requirements under man pwer Supply " ಎಂದು ತಿಳಿಸಿರುತ್ತಾರೆ. ಈ ಹಿನ್ನಲೆಯಲ್ಲಿ, ವಿಷಯವನ್ನು ಚರ್ಚಿಸಲಾಗಿ ದಿನಾಂಕ : 02.01.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 163ನೇ ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆಗೊಂಡ ವಿಷಯದಡಿಯಲ್ಲಿ ಬರುವ ವಿ.ವಿ.ನಿಲಯದ ಅಧ್ಯಾಪಕ ವೃಂದದವರಿಗೆ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವ ಸಂಬಂಧ ರಚಿಸಲಾಗಿರುವ ಸಮಿತಿಯ ವರದಿಯನ್ವಯ ಆಗಿರುವ ತೀರ್ಮಾನದಂತೆ ಕ್ರಮ ವಹಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಕುಲಪತಿಗಳು

ಕುಲಸಚಿವರು

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 54ನೇ ವಿಶೇಷ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಮಾನ್ಯ ಕುಲಪತಿಗಳು ಎಲ್ಲ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

* * * * * * *

ಕುಲಪತಿಗಳು

ಕುಲಸಚಿವರು